10. ಭಾಗ–II

ಅನುಬಂಧ–1

29032012ರ ಚುಕ್ಕಿ ಗುರುತಿನ ಮತ್ತು ಚುಕ್ಕಿ ರಹಿತ ಪ್ರಶ್ನೆಗಳಿಗೆ

ಉತ್ತರ, 30032012ರ ಚುಕ್ಕಿ ರಹಿತ ಪ್ರಶ್ನೆಗಳಿಗೆ ಉತ್ತರ ಮತ್ತು ತಡೆ ಹಿಡಿಯಲಾದ 2 ಪ್ರಶ್ನೆಗಳಿಗೆ ಉತ್ತರವನ್ನು ದಿನಾಂಕ 30032012ರಂದು ಮಂಡಿಸಲಾಯಿತು

ಸಬ್‌ಸ್ಟೇಷನ್ ಪ್ರಾರಂಭ

46 (351) ಶ್ರೀ ಮಂಜು. ಎ. (ಅರಕಲಗೂಡು) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ಮತಕ್ಷೇತ್ರದ ರುದ್ರಾಪಟ್ಟಣಕ್ಕೆ ವಿದ್ಯುತ್ ಸಬ್‌ಸ್ಟೇಷನ್ (ಎಂ.ಯು.ಎಸ್) ಸ್ಥಾಪಿಸುವಂತೆ ಈ ಹಿಂದೆ ಆಶ್ವಾಸನೆ ನೀಡಿದ್ದು, ಈವರೆವಿಗೆ ಸ್ಟೇಷನನ್ನು ಸ್ಥಾಪಿಸದಿರಲು ಕಾರಣವೇನು;

ಆ) ಈಗಲಾದರೂ ಕೂಡಲೇ ವಿ[redacted] ಸ್ಟೇಷನನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮತ್ತು ಆ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ರುದ್ರಾಪಟ್ಟಣ ಗ್ರಾಮದಲ್ಲಿ 1x8 ಎಂ.ವಿ.ಎ, ಸಾಮರ್ಥ್ಯದ – 66/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉದ್ದೇಶಿಸಿದೆ. ಈ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ರುದ್ರಾಪಟ್ಟಣದಲ್ಲಿ ರೇಷ್ಮೆ ಇಲಾಖೆಯ ವಶದಲ್ಲಿರುವ 2 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಸದರಿ ಇಲಾಖೆಯವರು ಭೂಮಿಯನ್ನು ನೀಡಲು ಒಪ್ಪಿಗೆ ನೀಡಿದ್ದು, ಮಾರುಕಟ್ಟೆ ದರ ನಿಗದಿಪಡಿಸಲು ರೇಷ್ಮೆ ಇಲಾಖೆಯ ಅಧಿಕಾರಿಗಳು ಮೇಲಾಧಿಕಾರಿಗಳಿಂದ ಒಪ್ಪಿಗೆಯನ್ನು ಪಡೆಯಲು ಪತ್ರ ವ್ಯವಹಾರವನ್ನು ನಡೆಸಿರುತ್ತಾರೆ. ರೇಷ್ಮೆ ಇಲಾಖೆಯ ಸ್ವಾಧೀನದಲ್ಲಿರುವ ಭೂಮಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು

ಸ್ವಾಧೀನಪಡಿಸಿಕೊಂಡ ನಂತರ, ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಮುಂದಿನ ಕ್ರಮ ಜರುಗಿಸಲಾಗುವುದು.

ವಿದ್ಯುತ್ ಖರೀದಿ

47 (328) ಶ್ರೀ ರಾಜು. ಕೆ. (ರಾಮನಗರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಎಷ್ಟು ವಿದ್ಯುಚ್ಛಕ್ತಿ ಖರೀದಿ ಮಾಡಲಾಗಿದೆ; ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ವಿದ್ಯುತ್ ವಿನಿಯೋಗಿಸಲಾಗಿದೆ;

ಆ) ಈಗ ಬೇಸಿಗೆ ಕಾಲವಾಗಿರುವುದರಿಂದ ಹೆಚ್ಚು ವಿದ್ಯುತ್ ಖರೀದಿ ಮಾಡಿ ರೈತರಿಗೆ ಅನುಕೂಲ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ರಾಜ್ಯದಲ್ಲಿ, ಕಳೆದ 3 ವರ್ಷಗಳಿಂದ ಖರೀದಿ ಮಾಡಲಾದ ವಿದ್ಯುಚ್ಛಕ್ತಿಯ ವಿವರಗಳು ಕೆಳಕಂಡಂತಿವೆ:–

ಕ್ರ ಸಂ.	ವರ್ಷ	ಖರೀದಿಸಿದ ವಿದ್ಯುತ್‌ನ ಪ್ರಮಾಣ (ಮಿ.ಯೂಗಳಲ್ಲಿ)
1	2008–09	1963.49
2	2009–10	1798.64
3	2010–11	7815.36
4	2011–12 (ಜನವರಿ–2012ರ ಅಂತ್ಯದವರೆಗೆ)	5342.41 (ತಾತ್ಕಾಲಿಕ)

ರಾಜ್ಯದ ವಿದ್ಯುತ್ ಯೋಜನೆಗಳಿಂದ ಉತ್ಪಾದನೆಯಾದ ವಿದ್ಯುತ್ ಕೇಂದ್ರ ವಿದ್ಯುತ್ ಯೋಜನೆಗಳಿಂದ ರಾಜ್ಯದ ಪಾಲು ಹಾಗೂ ಖರೀದಿ ಮಾಡಲಾದ ವಿದ್ಯುತ್ ಎಲ್ಲವೂ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಯಾಗಿ